ಮೊಳಕಾಲ್ಮೂರು ಸುರೇಶ, ಬಳ್ಳಾರಿ
*ಅಲ್ರಪ್ಪೋ, ಎರಡು ಕನ್ನಡ ಪದಗಳುಳ್ಳ ಆಂಗ್ಲ ಪದ ಯಾವುದಪ್ಪೋ?*




ಕೋಕ–ಕೋಲ. ಮೂರರದ್ದೂ ಇದೆ – ಮೈನಾರಿಟೀ!

ಬಸವನಗೌಡ ಹೆಬ್ಬಳಗೆರೆ, ಚನ್ನಗಿರಿ
*ಕುಡುಕನಿಗೂ, ಕೆಡುಕನಿಗೂ ಇರುವ ವ್ಯತ್ಯಾಸವೇನು?*
ಕುಡುಕ ಟೈಟ್; ಕೆಡುಕ ಲೂಸ್.

ನವಿರವಿ, ಬಾಳೆಹೊನ್ನೂರು
*ದೇವರಿಗೆ ಏಕೆ ಅಧಿಕ ಕೈಗಳು?*
ಕಮಲನಯನ, ಕಮಲಹಸ್ತ, ಕಮಲಪಾದ ಎನ್ನಿಸಿಕೊಂಡು ಬಿಜೆಪಿಯ ಪಕ್ಷಪಾತಿ ಎಂಬ ಆರೋಪ ಹೊಂದದಿರಲು.

ವಿ. ಹೇಮಂತ ಕುಮಾರ್, ಬೆಂಗಳೂರು
*ಎಲ್ಲೋ ಹುಟ್ಟಿ ಎಲ್ಲಿಗೋ ಹರಿಯುವ ನದಿಗೂ, ಎಲ್ಲೋ ಹುಟ್ಟಿ ಯಾರಿಗೋ ಸೇರುವ ಹೆಣ್ಣಿಗೂ ವ್ಯತ್ಯಾಸವೇನು?*
ಹೆಚ್ಚೇನಿಲ್ಲ. ಎರಡೂ ನೆರೆ ಬರುವವರೆಗೆ ಮಾತ್ರ ಸೊಗಸು.

ಬೂಕನಕೆರೆ ವಿಜೇಂದ್ರ, ಮೈಸೂರು
*ರಾವಣ ಸೀತೆಯನ್ನು ಇಷ್ಟಪಟ್ಟರೂ ಅವಳ ಮೇಲೇಕೆ ಅತ್ಯಾಚಾರ ಮಾಡಲಿಲ್ಲ?*




ಅಬಲೆಯ ಮೇಲೆ ಅತ್ಯಾಚಾರ ಮಾಡಲು ಅವನೇನು ಇಂದ್ರ, ಚಂದ್ರ ಅಥವಾ ಮನುಷ್ಯನೇ? ರಕ್ಕಸರು ಅತ್ಯಾಚಾರ ಮಾಡುವುದಿಲ್ಲ!

ಆರತಿ ಘಟಿಕಾರ್, ದುಬೈ
*ಸರ್ಕಾರಿ ಕೆಲಸ ದೇವರ ಕೆಲಸ ಎಂಬುದರ ಅರ್ಥವೇನು?*
ಕೆಲಸ ಆಗಬೇಕಾದರೆ ಸೂಕ್ತವಾದ ನೈವೇದ್ಯ ಆಗಬೇಕು ಅಥವಾ ಸರಿಯಾಗಿ ಅಷ್ಟೋತ್ತರ, ಮಂಗಳಾರತಿ ಆಗಬೇಕು ಎಂದು!

ಸೀತಾರಾಮಾಚಾರಿ, ದಾವಣಗೆರೆ
*ಮತ್ತು ಹಾಗೂ ಮೃತ್ಯು; ಇವುಗಳಿಗೆ ಇರುವ ವ್ಯತ್ಯಾಸವೇನು?*
ಮತಿ ನಿಂತರೆ ಮತ್ತು, ಗತಿ ನಿಂತರೆ ಮೃತ್ಯು.

ಪಿ.ಜೆ. ರಾಘವೇಂದ್ರ, ಮೈಸೂರು
*ಜಾತಿ ಗಣತಿಯಂತೆ ಭ್ರಷ್ಟರ ಗಣತಿ ಏಕಿಲ್ಲ?*
ಮಾಡಬೇಕಾಗಿಲ್ಲ; ಒಟ್ಟು ಜನಸಂಖ್ಯೆ – (ಮಕ್ಕಳ ಸಂಖ್ಯೆ+1) = ಭ್ರಷ್ಟರ ಸಂಖ್ಯೆ! ಆ 1 ಓದುತ್ತಿರುವ ನೀವೇ!

ಆರ್. ಮಧುಸೂದನ್, ಹಾಸನ
*ಒಂದು ವೇಳೆ ನಾಲಿಗೆಗೂ ಎಲುಬು ಇದ್ದಿದ್ದರೆ ಏನಾಗುತ್ತಿತ್ತು?*
ಮಾಂಸಾಹಾರಿಗಳು ಮೂಳೆ ಕಡಿಯುವಾಗ ಅದು ಪ್ರಾಣಿಯದೋ, ತಮ್ಮದೋ ಎಂದು ಅರಿಯದೆ ಗೊಂದಲವಾಗುತ್ತಿತ್ತು.

ಜೆ.ಆರ್. ಆದಿನಾರಾಯಣಮುನಿ, ಬೆಂಗಳೂರು
*ಭ್ರಷ್ಟಾಚಾರವಿಲ್ಲದ ರಾಷ್ಟ್ರ ಯಾವುದು?*
ಧೃತರಾಷ್ಟ್ರ!

ಎಂ.ಜಿ. ಚನ್ನಪ್ಪಸ್ವಾಮಿ, ಅರಬಿಳಚಿ ಕ್ಯಾಂಪ್
*ಮಾತೃಭಾಷೆ ಕನ್ನಡವಾದರೆ ಪಿತೃಭಾಷೆ ಯಾವುದು ರಾಮ್?*
ಸಂಸ್ಕೃತ– ಎಲ್ಲಾ ಪಿತೃಕಾರ್ಯಗಳನ್ನೂ ಸಂಸ್ಕೃತದಲ್ಲೇ ಮಾಡುವುದು!

ಎಚ್.ಆರ್. ದೇಸಾಯಿ, ರಾಯಚೂರು
*ಯಾವುದನ್ನು ಏರುವುದು ಕಠಿಣ – ಕೀರ್ತಿಶಿಖರವನ್ನೋ, ಎವರೆಸ್ಟ್ ಶಿಖರವನ್ನೋ?*
ಕೀರ್ತಿಶಿಖರವನ್ನೇ – ಅದು ನಿರಂತರ ಸಾಧನೆ ಬೇಡುವ ನೆವರ್ ರೆಸ್ಟ್ ಶಿಖರ!

ಜಯದೇವ ಹಲಕಿ, ಗೋಕಾಕ
*ಡಾ.ರಾಜ್ ಕೈಯಲ್ಲಿ ಲಾಂಗ್ ಇರಲಿಲ್ಲ. ಡಾ. ಶಿವಣ್ಣ ಕೈಯಲ್ಲಿ ಖಾಯಮ್ಮಾಗಿ ಲಾಂಗ್ ಇರುತ್ತಲ್ಲಾ...?*
ಆಗಿನದು ದಡ್ಡರ ಕಾಲ, ಈಗಿನದು ಒರಟರ ಕಾಲ; ದಡ್ಡನಿಗೆ ಮಾತಿನ ಪೆಟ್ಟು, ಒರಟನಿಗೆ ಲಾಂಗಿನ ಪೆಟ್ಟು.

ಟಿ.ಎಂ. ಮಾನಪ್ಪ, ಶಿವಮೊಗ್ಗ
*ಮದುವೆ ಜೀವಾವಧಿ ಶಿಕ್ಷೆಯಾದರೆ ಮಧುಚಂದ್ರಕ್ಕೆ ಏನೆನ್ನುತ್ತೀರಿ?*
ಪೆರೋಲ್.

## ಬಹುಮಾನಿತ ಪ್ರಶ್ನೆ

ಬಿ.ಎ. ಅಜರುದ್ದೀನ್, ಬಾಚಹಳ್ಳಿ
*ರಾಜಾ ಪ್ರತ್ಯಕ್ಷ ದೇವತಾ; ರಾಜಕಾರಣಿ?*
ಇವನೂ ದೇವತೆಯೇ – ಕ್ಷುದ್ರ ದೇವತೆ!

ಎಂ. ಮೃತ್ಯುಂಜಯ, ಚಿತ್ರದುರ್ಗ
*ಮದುವೆಯ ಹೊಸತರಲ್ಲಿ ಮಡದಿ ಪ್ರೇಯಸಿ; ಮಧ್ಯವಯಸ್ಸಿನಲ್ಲಿ ಗೆಳತಿ; ಮುಪ್ಪಿನಲ್ಲಿ ದಾದಿ. ಗಂಡು?*
ಮದುವೆಯ ಹೊಸತರಲ್ಲಿ ಪಾಮರೇನಿಯನ್; ಮಧ್ಯವಯಸ್ಸಿನಲ್ಲಿ ಗಾಣದೆತ್ತು; ಮುಪ್ಪಿನಲ್ಲಿ ಕೋಲೆಬಸವ.

ಕೆ. ಹರೀಶ್ ಕುಮಾರ್, ಪುತ್ತೂರು
*ಸಾವನ್ನೇ ಗೆಲ್ಲುವ ಫಾರ್ಮುಲಾ ಮಾನವರಿಗೆ ಗೊತ್ತಿದ್ದರೆ ಏನಾಗುತ್ತಿತ್ತು?*
ಫಾರ್ಮುಲಾ ಒನ್ ರೇಸ್‌ಗಳಲ್ಲಿ ಮತ್ತಷ್ಟು ವೇಗ ಹೆಚ್ಚುತ್ತಿತ್ತು.

ಪ್ರಭಾಕರ ಗುಪ್ತ, ಹಾಸನ
*ಕೆ.ಎಸ್.ಆರ್.ಟಿ.ಸಿ. ಯವರು ನೀಡುವ ಟಿಕೆಟ್ಟಿನಲ್ಲಿ ಹಣ ಮಾತ್ರ ನಮೂದಿಸಿರುತ್ತಾರೆ.*




*ದೂರ ಮಾತ್ರ ಇರುವುದಿಲ್ಲ. ಏಕೆ?*
ದೂರ ನಮೂದಿಸಿಲ್ಲವೆಂದು ದೂರದ್ದರಿಂದ ದೂರ ಟಿಕೆಟ್ಟಿಂದ ದೂರವಂತೆ.

ಆರ್.ಎಫ್. ಚೋಬಾರಿ, ಹಿಂಡಲಗಾ
*ನಾವು ಊಟ ಮಾಡುವ ಅಕ್ಕಿ ಕಾಳಿನ ಮೇಲೆ ದೇವರು ನಮ್ಮ ಹೆಸರನ್ನು ಬರೆದಿರುತ್ತಾನೇಕೆ?*
ಬೇರೆಯವರ ಆಹಾರವನ್ನೂ ಬಡಿದು ಬಾಯಿಗೆ ಹಾಕಿಕೊಳ್ಳದಿರಲಿ ಎಂದು.

ಕುಮಾರ ಚಲವಾದಿ, ಹೊಳೆನರಸಿಪುರ
*ಎಲ್ಲ ಬುದ್ಧಿವಂತರೂ ಸೇರಿ ಒಂದೇ ಪಾರ್ಟಿ ಮಾಡಿಕೊಂಡು ಚುನಾವಣೆಗೆ ನಿಂತರೆ?*
ಐವರು ಬುದ್ಧಿವಂತರು ಒಂದೆಡೆ ಇದ್ದಾರೆಂದರೆ ಒಬ್ಬ ಸತ್ತಿದ್ದಾನೆ, ನಾಲ್ವರು ಹೊತ್ತಿದ್ದಾರೆಂದೇ ಅರ್ಥ. ಬುದ್ಧಿವಂತರು ಸೇರುವುದಿಲ್ಲ!

■ ರಾಮ್